# ಅರೆರೆ... ಐಸ್‌ಕ್ರೀಮ್ ಕಿವಿಯೋಲೆ!



ಬೇಸಿಗೆ ಅಂದ್ರೆ ಐಸ್‌ಕ್ರೀಮ್ ಮೆಲ್ಲಬೇಕೆನಿಸುತ್ತದೆ. ಫ್ಯಾಷನ್‌ಪ್ರಿಯರು ಇದನ್ನೇ ಕಿವಿಯೋಲೆಯಾಗಿಸಿ ಮೆರೆಯಲಾರಂಭಿಸಿದ್ದಾರೆ. ಕೋನ್ ಆಕಾರದ, ಕಪ್ ವಿನ್ಯಾಸದ ಓಲೆ, ಹ್ಯಾಂಗಿಂಗ್ಸ್ ಧರಿಸಿ ಸಖತ್ ಆಗಿ ಮಿಂಚುತ್ತಿದ್ದಾರೆ.

■ ಆಶಾ ಎಸ್. ಕುಲಕರ್ಣಿ



ಐಸ್‌ಕ್ರೀಮ್ ಎಂದಾಕ್ಷಣ ಲಲನೆಯರ ಕಿವಿ ನೆಟ್ಟಗಾಗುತ್ತದೆ. ಕಣ್ಣುಗಳಲ್ಲಿ ಮಿಂಚಿನ ಸಂಚಾರ. ಅದೂ ಬೇಸಿಗೆಯಲ್ಲಿ ತಣ್ಣಗೆ ಐಸ್‌ಕ್ರೀಮ್ ಮೆಲ್ಲುವ ಮಜಾನೆ ಬೇರೆ. ಕೋನ್, ಕಪ್, ಸ್ಲೈಸ್, ಕ್ಯಾಂಡಿ ಎಲ್ಲವನ್ನೂ ತಿಂದು ತೃಪ್ತಿಯಾಗುವ ಕಾಲವಿದು. ಫ್ಯಾಷನ್ ಕ್ಷೇತ್ರದಲ್ಲೂ ಐಸ್‌ಕ್ರೀಮ್ ಸದ್ದು ಮಾಡುತ್ತಿದ್ದು, ಹೆಂಗಳೆಯರು ಐಸ್‌ಕ್ರೀಮ್ ವಿನ್ಯಾಸದ ಕಿವಿಯೋಲೆ ಹಾಕಿ ಮೆರೆಯಲಾರಂಭಿಸಿದ್ದಾರೆ.

ರೋಮಾಂಚಕ, ತಿಳಿಯಾದ ಬಣ್ಣಗಳಲ್ಲಿ (Pastel colors) ಲಭ್ಯವಿರುವ ಈ ಕಿವಿಯೋಲೆಗಳು ಜನಪ್ರಿಯವಾಗುತ್ತಿವೆ. ಪಾಲಿಮರ್ ಕ್ಲೇನಿಂದ ಮಾಡಿದ ಹಗುರ ಮತ್ತು ನೈಜವಾಗಿ ಕಾಣುವ ಈ ಕಿವಿಯೋಲೆ ಟ್ರೆಂಡ್ ಅನ್ನೇ ಸೃಷ್ಟಿಸಿದೆ.

ಹೆಣ್ಣು ಎಷ್ಟೇ ಸೌಂದರ್ಯವತಿಯಾಗಿದ್ದರೂ ಅವಳ ಅಂದ ಎದ್ದು ಕಾಣಲು ಅಲಂಕಾರ ಮಾಡಿಕೊಳ್ಳುವುದು ಅವಶ್ಯಕ. ಮಹಿಳೆಯರ ಅಲಂಕಾರದಲ್ಲಿ ಕಿವಿಯೋಲೆ ಪ್ರಮುಖಪಾತ್ರ ವಹಿಸುತ್ತಿದೆ. ಅದು ಮುಖದ ಅಂದವನ್ನು ಹೆಚ್ಚಿಸುವುದರ ಜೊತೆಗೆ ವಿಶಿಷ್ಟ ಲುಕ್ ನೀಡುತ್ತದೆ. ಕಿವಿಯೋಲೆಗಳು ಸಾಂಪ್ರದಾಯಿಕದ್ದೇ ಆಗಿರಬಹುದು, ಇಲ್ಲವೇ ಆಧುನಿಕ ವಿನ್ಯಾಸದ್ದೇ ಆಗಿರಬಹುದು, ಇವುಗಳಿಂದಲೇ ಮುಖದ ಸೌಂದರ್ಯ ಇಮ್ಮಡಿಯಾಗುವುದರಲ್ಲಿ ಅನುಮಾನವಿಲ್ಲ.

ಕಿವಿಯೋಲೆ ಧರಿಸಿದರೆ ಸಾಕಾಗುತ್ತಿಲ್ಲ. ಬದಲಾಗಿ ಏಳೆಂಟು ಕಡೆ ಕಿವಿ ಚುಚ್ಚಿಸಿಕೊಂಡು ವಿವಿಧ ವಿನ್ಯಾಸದ ಕಿವಿಯೋಲೆ ಧರಿಸುತ್ತಿದ್ದಾರೆ. ಅದೇ ಇಂದಿನ ಫ್ಯಾಷನ್ ಟ್ರೆಂಡ್ ಎನಿಸಿದೆ.